ಕರ್ನಾಟಕ ಸರ್ಕಾರ

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ,**

**ಮಲ್ಲೇಶ್ವರಂ, ಬೆಂಗಳೂರು-560 003.**

**ಸಂಖ್ಯೆ:- ದ್ವಿಪಿಯುಸಿ.ಪಿಯು3.ಹೊ.ವಿ.ನೋಂ/1/2025-26 ದಿನಾಂಕ: 18-10-2025.**

## ಜ್ಞಾ ಪ ನ

**ವಿಷಯ:** 2025-26ನೇ ಶೈಕ್ಷಣಿಕ ಸಾಲಿನಲ್ಲಿ ದ್ವಿತೀಯ ಪಿಯುಸಿ ತರಗತಿಗಳಿಗೆ ದಾಖಲಾದ ಹೊಸ (Freshers) ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಪಾವತಿಸುವ ಬಗ್ಗೆ.

**ಉಲ್ಲೇಖ:**
1. ಮಂಡಲಿಯ ಸುತ್ತೋಲೆ ಸಂಖ್ಯೆ:-ಮಾ4.ದ್ವಿಪಿಯುಸಿ.ಪ.ಶುಲ್ಕ/2025- 26 ದಿನಾಂಕ:- 19-06-2025.
2. ಮಂಡಲಿಯ ಇದೇ ಸಮಸಂಖ್ಯೆ ಪತ್ರದ ಸುತ್ತೋಲೆ ದಿನಾಂಕ: 08-10-2025.

--------

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ-1ರ **ಸುತ್ತೋಲೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.**

ಮುಂದುವರೆದು, 2026ರ ದ್ವಿತೀಯ ಪಿಯುಸಿ ಪರೀಕ್ಷೆ-1ಕ್ಕೆ ಎಲ್ಲಾ ಪ್ರಾಂಶುಪಾಲರುಗಳು ತಮ್ಮ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ತರಗತಿಗೆ **ದಾಖಲಾದ ಹೊಸ ವಿದ್ಯಾರ್ಥಿಗಳ ನೋಂದಣಿಯನ್ನು KSEAB PU EXAM PORTAL ನಲ್ಲಿ ನಿಗದಿತ ದಿನಾಂಕದೊಳಗೆ ಮಾಡುವಂತೆ ಉಲ್ಲೇಖ-2 ರಲ್ಲಿ ತಿಳಿಸಲಾಗಿದೆ. ಈಗಾಗಲೇ ವಿದ್ಯಾರ್ಥಿಗಳಿಂದ ಪಡೆದಿರುವ ಪ್ರಾಯೋಗಿಕ ಪರೀಕ್ಷಾ ಶುಲ್ಕ, ಲಿಖಿತ ಪರೀಕ್ಷಾ ಶುಲ್ಕ ಹಾಗೂ ಅಂಕಪಟ್ಟಿ ಶುಲ್ಕವನ್ನು ಈ ಹಿಂದಿನಂತೆ " 0202-01-101-1-06 (ಇತರೆ ಪರೀಕ್ಷೆ ಶುಲ್ಕ) "ಲೆಕ್ಕ ಶೀರ್ಷಿಕೆಗೆ ಕೆ-2 ಚಲನ್ ಮೂಲಕ ಕಡ್ಡಾಯವಾಗಿ ಪಾವತಿಸಬೇಕು. ಪಾವತಿಸಬೇಕಾದ ಶುಲ್ಕದ ವಿವರಗಳು ಕೆಳಕಂಡಂತಿವೆ.**

| ಸಂ | ಕಾಲೇಜಿನ ವಿಧ | ಶುಲ್ಕಗಳ ವಿವರ | ಸಾಮಾನ್ಯ ವರ್ಗ ಜಿ.ಎಂ. | | ಪ.ಜಾ/ಪ.ಪಂ/ಪ್ರವರ್ಗ-1 | | 2A/2B,3A,3B | |
|---|---|---|---|---|---|---|---|---|
| | | | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು |
| 1 | ಸರ್ಕಾರಿ ಪದವಿ ಪೂರ್ವ ಕಾಲೇಜು | ಪರೀಕ್ಷಾ ಶುಲ್ಕ | ರೂ. 400 | - | - | - | - | - |
| | | ಪ್ರಾಯೋಗಿಕ ಪರೀಕ್ಷಾ ಶುಲ್ಕ | ರೂ. 110 ಪ್ರತೀ ಪ್ರಾಯೋಗಿಕ ವಿಷಯಕ್ಕೆ | - | - | - | - | - |
| | | ಅಂಕಪಟ್ಟಿ ಶುಲ್ಕ | ರೂ. 50 | ರೂ.50 | ರೂ.50 | ರೂ.50 | ರೂ.50 | ರೂ.50 |
| 2 | ಅನುದಾನಿತ /ಅನುದಾನ ರಹಿತಪದವಿ ಪೂರ್ವ ಕಾಲೇಜು | ಪರೀಕ್ಷಾ ಶುಲ್ಕ | ರೂ. 400 | ರೂ. 400 | - | - | - | - |
| | | ಪ್ರಾಯೋಗಿಕ ಪರೀಕ್ಷಾ ಶುಲ್ಕ | ರೂ. 110 ಪ್ರತೀ ಪ್ರಾಯೋಗಿಕ ವಿಷಯಕ್ಕೆ | ರೂ. 110 ಪ್ರತೀ ಪ್ರಾಯೋಗಿಕ ವಿಷಯಕ್ಕೆ | - | - | - | - |
| | | ಅಂಕಪಟ್ಟಿ ಶುಲ್ಕ | ರೂ. 50 | ರೂ.50 | ರೂ.50 | ರೂ.50 | ರೂ.50 | ರೂ.50 |

ಮೇಲೆ ತಿಳಿಸಿರುವಂತೆ ಪರೀಕ್ಷಾ ಶುಲ್ಕಗಳನ್ನು ಪಾವತಿಸಿದ ಕೆ-2 ಚಲನ್ ಪ್ರತಿಯನ್ನು ಕಡ್ಡಾಯವಾಗಿ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರ ಲಾಗಿನ್‌ನಲ್ಲಿ ಇಂಧೀಕರಿಸುವುದು. ತಪ್ಪಿದಲ್ಲಿ ವಿದ್ಯಾರ್ಥಿಯ ಪ್ರವೇಶ ಪತ್ರವನ್ನು ತಡೆಹಿಡಿಯಲಾಗುವುದು. ಪಾವತಿಸಿದ ಕೆ2 ಚಲನ್‌ನ ಮೂಲ ಪ್ರತಿಯನ್ನು ವಿದ್ಯಾರ್ಥಿಗಳ ಚೆಕ್‌ಲಿಸ್ಟ್‌ನೊಂದಿಗೆ ಪ್ರಾಂಶುಪಾಲರುಗಳು ತಮ್ಮ ಜಿಲ್ಲೆಯ ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ) ರವರಿಗೆ **ನಿಗದಿತ ದಿನಾಂಕದೊಳಗೆ ಸಲ್ಲಿಸುವುದು**.

ಅಧ್ಯಕ್ಷರು
ಕಶಾಪ&ಮೌನಿ.ಮಂಡಲಿ
ಬೆಂಗಳೂರು.

**ಇವರಿಗೆ:-**

1) ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ ) ಇವರಿಗೆ.
2) ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ **(ಜಿಲ್ಲಾ ಉಪನಿರ್ದೇಶಕರ ಮೂಲಕ)** ಅಗತ್ಯ ಕ್ರಮಕ್ಕಾಗಿ.
3) ಮಂಡಲಿಯ ಸಹಾಯಕ ನಿರ್ದೇಶಕರು, ಗಣಕ ಶಾಖೆ, (ಪಿ.ಯು) ಇವರಿಗೆ ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು ಗೌರವಗಳೊಂದಿಗೆ:-**

1) ಮಾನ್ಯ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ), 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-12 ರವರಿಗೆ ಅವಗಾಹನೆಗೆ.
2) ಮಾನ್ಯ ನಿರ್ದೇಶಕರು(ಪರೀಕ್ಷೆಗಳು), ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3 ರವರಿಗೆ
3) ಜಂಟಿ ನಿರ್ದೇಶಕರು(ಪಿಯು ಪರೀಕ್ಷೆ), ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3 ರವರಿಗೆ.
4) ಉಪನಿರ್ದೇಶಕರು(ಪಿಯು ಪರೀಕ್ಷೆ), ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3 ರವರಿಗೆ.
5) ಲೆಕ್ಕಾಧಿಕಾರಿಗಳು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3
6) ಕಛೇರಿ/ಹೆಚ್ಚುವರಿ ಪ್ರತಿ.